ಕ್ರೋಢೀಕರಣ ಯೋಜನೆ ಅಡಿಯಲ್ಲಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಟ್ಟು 1,200 ಸಂಖ್ಯೆಯ ವಿವಿಧ ರಚನೆಗಳನ್ನು ರು. 932.50ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡುವ ಯೋಜನೆಯನ್ನು ರೂಪಿಸಿ ಆರ್ಥಿಕ ನೆರವಿಗಾಗಿ ಪ್ರಸ್ತಾವನೆಯನ್ನು ವಿಶ್ವಬ್ಯಾಂಕಿಗೆ ಕಳುಹಿಸಿದೆ.

ಬೆಂಗಳೂರು ನಗರದಲ್ಲಿ ಕಲಬೆರಕೆ ಹಾಲು ನಿಲ್ಲಿಸುವುದರ ಬಗ್ಗೆ

323 (2848) : ಶ್ರೀ ಸುರೇಶಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿಗೆ ಅವ್ಯಾಹತವಾಗಿ ಹೊರ ರಾಜ್ಯಗಳಿಂದ ಹರಿದು ಬರುತ್ತಿರುವ ಕಲಬೆರಕೆ ಹಾಲನ್ನು ನಿಲ್ಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ವಶಪಡಿಸಿಕೊಂಡ ಕಲಬೆರಕೆ ಹಾಲಿನ ಪ್ರಮಾಣವೆಷ್ಟು;

ಇ) ಕಲಬೆರಕೆ ಹಾಲು ನಾಗರೀಕರ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮದ ಬಗ್ಗೆ ಸರ್ಕಾರಕ್ಕೆ ತಿಳಿದಿದ್ದರೂ ಈ ರೀತಿ ಹಾಲಿನ ಸರಬರಾಜು ನಿರಂತರವಾಗಿ ಮುಂದುವರಿಯುವುದಕ್ಕೆ ಕಾರಣವೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಮಹಾನಗರಪಾಲಿಕೆಗಳು, ನಗರಸಭೆಗಳು, ಹಾಗೂ ಟೌನ್ ಮುನಸಿಪಾಲಿಟಿಗಳಲ್ಲಿರುವ ಆಹಾರ ಪರೀಕ್ಷಕರುಗಳು, ಅಗಿಂದಾಗ್ಗೆ ಹಾಲಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಕಲಬೆರಕೆ ಎಂದು ದೃಢೀಕರಿಸಲ್ಪಟ್ಟ ಪ್ರಕರಣಗಳಲ್ಲಿ ಆಹಾರ ಕಲಬೆರಕೆ ತಡೆಗಟ್ಟುವ ಕಾಯ್ದಯಡಿಯಲ್ಲಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡುತ್ತಿದ್ದಾರೆ. ನಿರ್ದೇಶಕರು, ಪಶುಪಾಲನಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಆರೋಗ್ಯ, ಸಾರಿಗೆ ಮತ್ತು ಪೊಲೀಸ್ ಇಲಾಖೆ ಪ್ರತಿನಿಧಿಗಳನ್ನೊಳಗೊಂಡ ಅಡ್‌ಹಾಕ ತಂಡ ರಚಿಸಿ ನೆರೆ ರಾಜ್ಯಗಳಿಂದ ಬರುವ ಕಲಬೆರಕೆ ಹಾಲನ್ನು ತಡೆಗಟ್ಟಲು ಕಾರ್ಯಕ್ರಮ ಹಾಕಿಕೊಂಡು ಅದರ ಪ್ರಕಾರ ಕಾರ್ಯನಿರ್ವಹಿಸುತ್ತಿದೆ.

ಆ) ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 30,600 ಲೀಟರ್‌ಗಳಷ್ಟು ಕಲಬೆರಕೆ ಹಾಲನ್ನು ವಶಪಡಿಸಿಕೊಂಡು ಆಹಾರ ಕಲಬೆರಕೆ ತಡೆಗಟ್ಟುವ ಕಾನೂನಿನಡಿಯಲ್ಲಿ ನಾಶಪಡಿಸಲಾಗಿದೆ.

ಇ) ಕಲಬೆರಕೆ ಹಾಲು ಸರಬರಾಜಾಗುವುದನ್ನು ತಡೆಗಟ್ಟಲು ನಿರಂತರ ಕಾರ್ಯಕ್ರಮ ಹಾಕಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ. ಅಂತರ್‌ರಾಜ್ಯ ಹಾಲು ಸಾಗಾಣಿಕೆಯನ್ನು ನಿರ್ಭಂಧಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಬ್ಯಾಕ್‌ಲಾಗ್ ನೇಮಕದಲ್ಲಿ ಭ್ರಷ್ಟಾಚಾರ ಉಂಟಾಗಿರುವುದು

324 (2845) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸರ್ಕಾರದಲ್ಲಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಸಮಾಜ ಕಲ್ಯಾಣ ಇಲಾಖೆಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಗಮನಕ್ಕೆ ಬಂದಿದೆಯೇ;